ನಿರ್ಬಂಧ ಇರುವುದಿಲ್ಲ. ಆದ್ದರಿಂದ, ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಇಲ್ಲ. ಪ್ರಸ್ತುತ ಉತ್ತಮಗುಣಮಟ್ಟದ ಈರುಳ್ಳಿಗೆ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಇರುವ ಕಾರಣ ಬೆಂಬಲ ಬೆಲೆ ಘೋಷಿಸಿರುವುದಿಲ್ಲ.

ಋ) ಅನ್ವಯಿಸುವುದಿಲ್ಲ.

ತುರುವೇಕೆರೆ ಪಟ್ಟಣವನ್ನು ಪುರಸಭೆಯಾಗಿ ಪರಿವರ್ತಿಸುವುದು

1886(1180); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ತುರುವೇಕೆರೆ ಪಟ್ಟಣವು ಬಹಳ ದೊಡ್ಡಮಟ್ಟದಲ್ಲಿ ಬೆಳೆದಿದ್ದು, ಇದನ್ನು ಪುರಸಭೆಯಾಗಿ ಪರಿವರ್ತಿಸಲು ವಿನಂತಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರದಿಂದ ತುರುವೇಕೆರೆ ಪಟ್ಟಣವನ್ನು ಪುರಸಭೆಯಾಗಿ ಯಾವಾಗ ಪರಿವರ್ತಿಸಲಾಗುವುದು;

ಇ) ಈ ಬಗ್ಗೆ ಸರ್ಕಾರದಿಂದ ಯಾವ ಕ್ರಮ ತೆಗೆದುಕೊಳ್ಳಲಾಗಿದೆ?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇಲ್ಲ. ಕರ್ನಾಟಕ ಪುರಸಭೆಗಳ ಕಾಯ್ದೆ 1964 ಕಲಂ 3 ರನ್ವಯ ಯಾವುದೇ ಪ್ರದೇಶಕ್ಕೆ ಪುರಸಭೆಯನ್ನು ಸ್ಥಾಪಿಸಲು ಅಂತಹ ಪ್ರದೇಶದ ಜನಸಂಖ್ಯೆ 20000 ಕ್ಕಿಂತ ಅಧಿಕ ಹಾಗೂ 50000 ಮೀರದಂತೆ ಇರಬೇಕು. 2011 ರ ಜನಗಣತಿಯಂತೆ ತುರುವೇಕೆರೆ ಪಟ್ಟಣ ಪಂಚಾಯತಿಯ ಜನಸಂಖ್ಯೆ 14194 ಇರುತ್ತದೆ. ಆದುದರಿಂದ ತುರುವೇಕೆರೆ ಪಟ್ಟಣ ಪಂಚಾಯತನ್ನು ಪುರಸಭೆಯನ್ನಾಗಿ

ಪರಿವರ್ತಿಸಲು ಮೇಲೆ ತಿಳಿಸಿದಂತೆ ಕಾಯ್ದೆಯನ್ವಯ ಅವಕಾಶವಿರುವುದಿಲ್ಲ.

ಆ) **ಮತ್ತು** ಇ) ಮೇಲಿನ ಉಪ ಪ್ರಶ್ನೆಯ ಉತ್ತರದಲ್ಲಿ ವಿವರಿಸಿದಂತೆ ತುರುವೇಕೆರೆ ಪಟ್ಟಣ ಪಂಚಾಯತನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿರುವುದಿಲ್ಲ.

ಪಟ್ಟಣ ಪಂಚಾಯಿತಿ ರಚನೆ

1887(1181); ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ)

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಮ್ಮಸಂದ್ರ ಗ್ರಾಮ ಹಾಗೂ ದಂಡಿನಶಿವರ ಗ್ರಾಮಗಳಲ್ಲಿ ಜನಸಂಖ್ಯೆಯ ಅಂದಾಜು 14000 ದಾಟಿದ್ದು, ಈ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ಮಾಡಲು ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಖಮರುಲ್ ಇಸ್ಲಾಂ (ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು)

ಅ) ಇಲ್ಲ. ಕರ್ನಾಟಕ ಪುರಸಭೆಗಳ ಕಾಯ್ದೆ 1964 ಕಲಂ 349 ರನ್ವಯ ಯಾವುದೇ ಪ್ರದೇಶಕ್ಕೆ ಪಟ್ಟಣ ಪಂಚಾಯತನ್ನು ಸ್ಥಾಪಿಸಲು ಅಂತಹ ಪ್ರದೇಶದ ಜನಸಂಖ್ಯೆ 10000 ಕ್ಕಿಂತ ಅಧಿಕ ಹಾಗೂ 20000 ಮೀರದಂತೆ ಇರಬೇಕು. 2011 ರ ಜನಗಣತಿಯಂತೆ ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಅಮ್ಮಸಂದ್ರ ಗ್ರಾಮ ಹಾಗೂ ದಂಡಿನಶಿವರ ಗ್ರಾಮದ ಜನಸಂಖ್ಯೆ 10000 ಕ್ಕಿಂತ ಕಡಿಮೆ ಇರುತ್ತದೆ. ಆದುದರಿಂದ ಸದರಿ ಗ್ರಾಮಗಳಿಗೆ ಪಟ್ಟಣ ಪಂಚಾಯತ ಸ್ಥಾಪಿಸಲು ಅವಕಾಶವಿರುವುದಿಲ್ಲ.